



# ಹೊನ್ನಕ್ಕಿಯ ಕಲರವ

ಚಿತ್ರ– ಬರಹ:
**ಎಸ್ ವಿ ಶ್ರೀನಿವಾಸಮೂರ್ತಿ**

ಹೊನ್ನಕ್ಕಿ ಅಥವಾ ಗೋಲ್ಡನ್ ಓರಿಯೋಲ್ ಎಂದು ಈ ಹಕ್ಕಿಯನ್ನು ಗುರುತಿಸುತ್ತಾರೆ. ಇದು ಓರಿಯೋಲಿಡೇ ಎಂಬ ಕುಟುಂಬಕ್ಕೆ ಸೇರಿದ ಹಕ್ಕಿ. ಈ ಕುಟುಂಬದಲ್ಲಿ ಸುಮಾರು ಮೂವತ್ತಾರು ಪ್ರಭೇದಗಳಿವೆ. ಎಲ್ಲ ಪ್ರಭೇದಗಳದ್ದೂ ಉಜ್ವಲ ಮೈಬಣ್ಣ. ಗೋಲ್ಡನ್ ಓರಿಯೋಲ್‌ಗಳದ್ದಂತೂ ಅಸದೃಶ ಸೌಂದರ್ಯ. ಯೂರೇಷಿಯನ್ ಗೋಲ್ಡನ್ ಓರಿಯೋಲ್, ಇಂಡಿಯನ್ ಗೋಲ್ಡನ್ ಓರಿಯೋಲ್, ಬ್ಲ್ಯಾಕ್ ನೇಪ್ಡ್ ಗೋಲ್ಡನ್ ಓರಿಯೋಲ್, ಬ್ಲ್ಯಾಕ್ ಹೆಡೆಡ್ ಗೋಲ್ಡನ್ ಓರಿಯೋಲ್ ಎಂಬಿತ್ಯಾದಿ ಪ್ರಭೇದಗಳೂ ಇವೆ.

ಮನೆಯ ಹತ್ತಿರ ಈ ಹಕ್ಕಿ ಯಾವಾಗಲೂ ಕಾಣಿಸಿಕೊಳ್ಳುತ್ತಲೇ ಇತ್ತು. ಆದರೆ ಅದರ ಫೋಟೋ ತೆಗೆಯುವುದು ಸುಲಭವಾಗಿರಲಿಲ್ಲ. ಕೂತಲ್ಲಿ ಕೂರದ ಹಕ್ಕಿಗಳ ಫೋಟೋ ತೆಗೆಯುವುದು ನಿಜಕ್ಕೂ ದೊಡ್ಡ ಸಾಹಸದ ಕೆಲಸವೇ ಸರಿ. ಆದರೂ ಸಾಕಷ್ಟು ಶ್ರಮವಹಿಸಿ ಇದರ ಕೆಲವು ಫೋಟೋಗಳನ್ನು ತೆಗೆಯುವಲ್ಲಿ ಯಶಸ್ವಿಯಾದೆ.